MATTERS UNDER RULE 312

re : Hardship to the Depositors in the Lokshikshana Trust, Hubli and non-refund of money by the Trust.

† SRI S. R. BOMMAI(Hubli).—I would like to read the notice sent by me and Sri Bhavurao Deshpande. It says as follows:—

" The Lok Shikshana Trust is one of the premier Institution of North Karnataka which is running Samyukta Karnataka Daily Publication from Bangalore and Hubli and other weekly and monthly Publi cations. This trust was built by devoted public works of North Karna taka Area. Sri R. R. Divakar was the sole trustee of the said trust.

As many as seven hundred poor and middle class families have deposited sums to the tune of Rs. 30 lakhs in the said trust. The Trustees have not paid any interests and have not returned their deposits inspite of repeated demands by some of the depositors. Many depositors depending upon the interest and the deposits for their daily maintenance. As a result of stoppage of payment of interest and non-returning of deposits, these people have been put to great hardship. No action was taken either by the Government or by the Charity Commissioner and Assistant Charity Commissioner inspite of respeated requests and complaints by depositors.

This Trust owns property more than one crore and machinery worth a crore. These huge properties were alleged to have been transferred by sole trustees to Karnatka Private Printers Limited which had share capital of Rs. 20,000 only. This Private Company was brought up and managed by Sri M.Y. Ghorpade, the then Finance Minister of the State.

Now that the said properties including movable and immovable and other publications of the trust alleged to have been transferred to Jaya Karnataka New Printers Limited. The history of transfer of the properties of the above-named trust are clear acts of cheating the public and also misuse, mis-appropriation of public properties. Both the transfereror and transferees are liable for prosecution. The depositors of the trust have also been cheated by the Trustees and transferrer of the trust. As a result of this, Sri Mallur, M.G. has started fast unto death on behalf of the depositors demanding immediate return of their deposits with interest Unless the Government intervenes in the matter and redress the grievances of the depositors or take legal action to save the property of the trust, a wide-spread agitation is likely to take place in North Karnataka which may lead to a grave situation in that area.

ಸರ್ಕಾರ ನೋಟೀಸ್ ಕೊಟ್ಟಮೇಲೆ ನನಗೆ ತಿಳಿದಮಟ್ಟಿಗೆ ಶ್ರೀ ಎಂ.ಜಿ. ಮಳ್ಳೂರ್‌ರವರು ಉಪವಾಸ ನಿಲ್ಲಿಸಿದ್ದಾರೆ. ಆದರೆ ಆ ಬಗ್ಗೆ ನನ್ನ ಮಾದವನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಶ್ರೀ ಮಳ್ಳೂರರವರಿಗೆ ಮಾತ್ರ ಹಣವನ್ನು ವಾಪಸ್ ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ಇದ್ದಂಥ ೧೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ಇನ್ನೂ ಸುಮಾರು ೭೦೦ ಜನ ಡಿಪಾಸಿಟರ್ಸ್ ಇದ್ದು, ೩೦ ಲಕ್ಷ ರೂಪಾಯಿಗಳಷ್ಟು ಡಿಪಾಸಿಟ್ ಹಣವಿದೆ ಎಂದು ತಿಳಿದ ವಿಚಾರವಾಗಿರುತ್ತದೆ. ಇದು ಒಂದು ಒಳ್ಳೆಯ ಟ್ರಸ್ಟ್ ಎನ್ನುವ ವೃಷ್ಟಿಯಿಂದ ಸಾರ್ವಜನಿಕರು ಅದರಲ್ಲಿ ಡಿಪಾಸಿಟ್ ಹಣವನ್ನು ಇಟ್ಟಿದ್ದರು. ಹೀಗೆ ಡಿಪಾಸಿಟ್ ಇಟ್ಟವರಿಗೆ ಸುಮಾರು ೧೯೭೬ನೇ ಇಸವಿಯಿಂದ ಇದುವರೆವಿಗೂ ಬಡ್ಡಿಯನ್ನೂ ಸಹ ಕೊಟ್ಟಿಲ್ಲ. ಹಾಗೂ ಮತ್ತೊಂದು ಜನಕ್ಕೆ ಹಣವನ್ನು ವಾಪಸ್ ಕೊಟ್ಟಿಲ್ಲ. ಇದರ ಬಗ್ಗೆ ಕಮಿಷನರ್ ಕಚೇರಿಯಿಂದ ಇನ್‌ಫರ್‌ಮೇಷನ್ ಪಡೆದು ಕೊಳ್ಳಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಪಬ್ಲಿಕ್ ಇಂಟರೆಸ್ಟ್ ಆಕ್ಟ್ ಪ್ರಕಾರವಾಗಿ ಸರ್ಟನ್ ಪಬ್ಲಿಕ್ ಪರ್ಪಸ್ ಗೊಸ್ಕರ ಎಂಬುದಕ್ಕೆ ಇರುತ್ತದೆ. ಸರ್ಕಾರಕ್ಕೆ ಏನೂ ಅಧಿಕಾರವಿರುವುದಿಲ್ಲವೆಂದಲ್ಲ. ಇದರ ಬಗ್ಗೆ ಡೆಪ್ಯುಟಿ ಕಮಿಷನರ್‌ರವರು ವಿಚಾರಣೆ ಮಾಡಬೇಕು. ಅಸಿಸ್ಟೆಂಟ್ ಕಮಿಷನರ್‌ರವರೂ ವಿಚಾರಣೆ ಮಾಡಬೇಕು. ಸಂಬಂಧಪಟ್ಟ ಡಿಪಾಸಿಟರ್ಸ್ ಈಗಾಗಲೇ ಇದರ ಬಗ್ಗೆ ತಮ್ಮ ತೊಂದರೆಗಳನ್ನು ನಿವೇದನೆ ಮಾಡಿಕೊಂಡಿರುತ್ತಾರೆ. ಅರ್ಜಿಗಳನ್ನೂ ಸಹ ಸಲ್ಲಿಸಿದ್ದಾರೆ. ೫-೬ ವರ್ಷಗಳಿಂದ ವಿಚಾರಣೆ ನಡೆಸುತ್ತಿರುವುದು ತ್ವರಿತವಾಗಿ ಆಗುತ್ತಿಲ್ಲ. ಇದರಿಂದಾಗಿ ಡಿಪಾಸಿಟರ್ಸ್‌ಗೆ ಬಹಳ ಕಷ್ಟವಾಗಿದೆ. ಸಂಪೂರ್ಣವಾಗಿ ಸರ್ಕಾರಕ್ಕೆ ಏನು ಅಧಿಕಾರವಿರುತ್ತದೆ ಅದನ್ನು ಉಪಯೋಗಿಸಿಕೊಳ್ಳಬೇಕು. ಟ್ರಸ್ಟ್‌ನಲ್ಲಿ ಏನಾದರೂ ಅವ್ಯವಹಾರಗಳು ನಡೆದಿದ್ದರೆ, ಟ್ರಸ್ಟ್ ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯದೆ ಹೋದರೆ ಟ್ರಸ್ಟಿನ ಪ್ರಾಪರ್‌ಟೀಸ್ ಮಿಸ್‌ಯೂಸ್ ಆದರ ಅಂಥ ಸಂದರ್ಭದಲ್ಲಿ ಆ ಟ್ರಸ್ಟನ್ನು ಸೂಪರ್‌ಸೀಡ್ ಮಾಡತಕ್ಕಂಥ ಒಂದು ಅಧಿಕಾರವಿರುತ್ತದೆಂದು ನಾನು ತಿಳಿದುಕೊಂಡಿರುತ್ತೇನೆ. ಇಲ್ಲಿ ಆ ರೀತಿಯಾಗಿ ಸೂಪರ್‌ಸೀಡ್ ಮಾಡತಕ್ಕಂಥ ಅವಕಾಶ ಇರುತ್ತದೆ. ಸಾರ್ವಜನಿಕರು ತಮ್ಮ ಶ್ರಮದಿಂದ ಕಟ್ಟಿದಂಥ ಒಂದು ಸಂಸ್ಥೆಯಾಗಿರುತ್ತದೆ. ಈವತ್ತಿನ ದಿವಸ ಇದು ಹಸ್ತಾಂತರವಾಗುತ್ತಿದೆ. ಬೇರೆಯವರ ಕೈಗೆ ಹೋಗುತ್ತಿದೆ, ಎರಡು ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಹೊಂದಿರತಕ್ಕಂಥ ಈ ಒಂದು ಸಂಸ್ಥೆ ಕೇವಲ ೨೦ ಸಾವಿರ ರೂಪಾಯಿ ಬಂಡವಾಳ ಹೂಡಿ ೮೦ ಸಾವಿರ ರೂಪಾಯಿ ಸಾಲ ಮಾಡಿ ಹೊಸ ಪತ್ರಿಕೆಯನ್ನು ಹೊರಡಿಸುತ್ತಿರುವ ಜಯಕರ್ನಾಟಕ ಪಬ್ಲಿಷರ್ಸ್ ಅವರ ಹೆಸರಿಗೆ ಈ ಟ್ರಸ್ಟ್ ಹೋಗುತ್ತಿದೆ. ಅವರು ಅದನ್ನು ಯಾವರೀತಿ ನಡೆಸಿಕೊಂಡು ಹೋಗುತ್ತಾರೆ ಎನ್ನುವುದು ಬೇರೆ ವಿಚಾರ. ಡಿಪಾಸಿಟರ್ಸ್ ಹಣ ಏಷ್ಟಿದೆ ಎನ್ನುವುದಕ್ಕೆ ಉದಾಹರಣೆ ಹೇಳುವುದಾದರೆ ೫೦-೬೦ ಸಾವಿರ ರೂಪಾಯಿಗಳಷ್ಟು ಬಾಡಿಗೆ ರೂಪದಲ್ಲಿಯೇ ಬರುತ್ತಿದೆ. ಒಂದು ಕೋಟಿ ರೂಪಾಯಿನಷ್ಟು ಬೆಲೆ ಬಾಳತಕ್ಕಂಥ ಮಿಷನರಿಯನ್ನು ಹೊಂದಿದ್ದು ಉತ್ಪನ್ನವಿದ್ದು ಟ್ರಸ್ಟಿನಿಂದ ಡಿಪಾಸಿಟರ್ಸ್‌ಗೆ ಕೊಡತಕ್ಕಂಥ ಹಣ ಯಾವ ಕಾರಣದಿಂದ ಕೊಡಲು ಸಾಧ್ಯವಾಗುತ್ತಿಲ್ಲವೋ ತಿಳಿಯುತ್ತಿಲ್ಲ. ಆದ್ದರಿಂದ ಸರ್ಕಾರದವರನ್ನು ಟ್ರಸ್ಟ್‌ನಿಂದ ಕೊಡತಕ್ಕಂಥ ಹಣವನ್ನು ಕೊಡುವುದಕ್ಕೆ ಯಾವ ರೀತಿಯಲ್ಲಿ ಸಾಧ್ಯವೊ ಅದನ್ನು ಸರ್ಕಾರದವರು ಆಲೋಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಡಿಪಾಸಿಟರ್ಸ್‌ಗಳಲ್ಲಿ ಅನೇಕ ಜನರು ಬಡವರೂ ಇದ್ದಾರೆ. ಆದ್ದರಿಂದ ಸರ್ಕಾರದವರು ಕಾಯಿದೆಗೆ ಅನುಗುಣವಾಗಿ ಪರ್ತಿಸಬೇಕೆಂದು ಹೇಳುತ್ತೇನೆ. The Government should use its good offices in the first instance and if not possible, then legal action should be taken.

† ಶ್ರೀ ಬಾವುರಾವ್ ದೇಶಪಾಂಡೆ (ಧಾರವಾಡ).—ಈ ವಿಚಾರದಲ್ಲಿ ಎರಡು ಮಹತ್ವವಾದ ಅಂಶಗಳನ್ನು ಹೇಳಬಯಸುತ್ತೇನೆ. ಅದೇನೆಂದರೆ ಟ್ರಸ್ಟ್ ವ್ಯವಸ್ಥೆಯಲ್ಲಿದ್ದಾಗ ಇದೊಂದು ಸಾರ್ವಜನಿಕ ಸಂಸ್ಥೆ, ಮತ್ತು ಉತ್ತಮವಾದ ಸಂಸ್ಥೆ ಎಂದು ಮುಖ್ಯವಾಗಿ ಪರ್ಸನ್‌ಗಳು, ಬಡವರೂ ತಮ್ಮ ಜೀವನದಲ್ಲಿ ಗಳಿಸಿರತಕ್ಕಂಥ ಹಣವನ್ನು ಡಿಪಾಸಿಟ್ ಆಗಿ ತೊಡಗಿಸಿದ್ದರು. ಅಲ್ಲದೆ ವಿಧವೆಯರೂ ಕೂಡ ಇದರಲ್ಲಿ ಹಣವನ್ನು ತೊಡಗಿಸಿದ್ದರು. ಈ ರೀತಿಯಾಗಿ ಸಾಮಾನ್ಯವಾಗಿ ೩೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಕೂಡಿಸಿದಂಥ ಒಂದು ಸಂಸ್ಥೆಯಾಗಿತ್ತು.

೨-೦೦ ಪಿ. ಎಂ.

ಟ್ರಸ್ಟಿನ ಪಕ್ಕದಲ್ಲಿರುವ ಒಂದು ಬಿಲ್ಡಿಂಗನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಅದರ ಹಿಂದೆ ಇರುವ ಇನ್ನೊಂದು ಕಟ್ಟಡವನ್ನು ಅಂಜೆ ಮತ್ತು ತಂತಿ ಇಲಾಖೆಯನ್ನು ನಡೆಸಲು ಬಾಡಿಗೆಗೆ ಕೊಟ್ಟಿದ್ದಾರೆ. ಈ ಸಂಸ್ಥೆಗೆ ಸೇರಿದ ಸಂಯುಕ್ತ ಮುದ್ರಣಾಲಯದ ಅಕ್ಕಪಕ್ಕದಲ್ಲಿ ವ್ಯಾಪಾರಕ್ಕೆ ಅನುಕೂಲವಾಗಿರ ತಕ್ಕಂಥ ಕಟ್ಟಡಗಳಿವೆ. ಅವುಗಳನ್ನೂ ಕೂಡ ಬಾಡಿಗೆಗೆ ಕೊಟ್ಟಿದ್ದಾರೆ. ಕೆಲವು ಗೋಡೌನ್‌ಗಳನ್ನು ಕಟ್ಟಿಸಿದ್ದಾರೆ. ಅವುಗಳಿಂದಲೂ ಬಾಡಿಗೆ ಬರುತ್ತಿದೆ. ಈ ರೀತಿ ಹಣ ಬಾಡಿಗೆಯ ರೂಪದಲ್ಲಿ ಬರುತ್ತಿರ ಬೇಕಾದರೆ ತೇವಣಿದಾರರ ಹಣ ಮತ್ತು ಅದರ ಬಡ್ಡಿಯನ್ನು ಮಾತ್ರ ಕೊಡುತ್ತಿಲ್ಲ. ಸಂಸ್ಥೆ ಬೆಳೆದಿದೆ. ಹಾಗೂ ಸಂಸ್ಥೆಯಲ್ಲಿರತಕ್ಕಂಥವರೆಲ್ಲರೂ ಶ್ರೀಮಂತರಾಗಿದ್ದಾರೆ. ಅದರಲ್ಲಿರುವವರು ಯಾರೂ ಬಡವರಾಗಿಲ್ಲ. ಸಾರ್ವಜನಿಕರ ಹಣವನ್ನು ಖಾಸಗಿ ಹಣದಂತೆ ಉಪಯೋಗ ಮಾಡಿಕೊಂಡು ಇದನ್ನು ಪ್ರಕಾಶನ ಸಂಸ್ಥೆಯಾಗಿ ಪ್ರತ್ಯೇಕ ಮಾಡಿದ್ದಾರೆ. ಈ ಟ್ರಸ್ಟಿನ ಉದ್ದೇಶ ಏನೆಂದರೆ ಪತ್ರಿಕೆಯನ್ನು ಪ್ರಕಾಶನ ಮಾಡುವುದು. ಆದರೆ ಈಗ ಆ ಪ್ರಕಾಶನವನ್ನು ಪ್ರತ್ಯೇಕ ಮಾಡಿದ್ದಾರೆ. ಆಸ್ತಿ ಪ್ರತ್ಯೇಕ ಮಾಡಿದ್ದಾರೆ. ಈ ಪ್ರಕಾಶನ ಸಂಸ್ಥೆ ಏನಿದೆ ಅದನ್ನು ಬೇರೆಯವರು ನಡೆಸುತ್ತಿದ್ದಾರೆ. ಆಸ್ತಿಯನ್ನು ತಮ್ಮ ಕಡೆಗೆ ಇಟ್ಟುಕೊಂಡಿದ್ದಾರೆ. ಈ ರೀತಿ ಮಾಡಿಕೊಂಡಿರುತ್ತಾರೆ. ಇದು ಕಾನೂನು ಬದ್ಧವಾಗಿ ಎಷ್ಟರ ಮಟ್ಟಿಗೆ ಸೂಕ್ತವಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಇದು ಕಾನೂನು ಬದ್ಧವಾಗಿ ಸರಿಯಾಗಿದೆ ಎಂಬುದಾಗಿ ಅನ್ನಿಸುವುದಿಲ್ಲ. ಸಂಯುಕ್ತ ಕರ್ನಾಟಕದ ಹುಬ್ಬಳ್ಳಿ ಸಂಚಿಕೆಯನ್ನು ನೋಡಿದರೆ ಅದರಲ್ಲಿರತಕ್ಕಂಥ ಜಾಹಿರಾತಿನಿಂದಲೇ ಬೇಕಾದಷ್ಟು ಲಾಭ ಬರುತ್ತಿದೆ. ಇವೆಲ್ಲಾ ನೋಡಿದರೆ ಬಡ ಜನರ ಹಣವನ್ನು ವಾಪಸ್ಸು ಕೊಡಬೇಕಾದರೆ ಆ ತೇವಣಿದಾರರು ಉಪವಾಸ ಮಾಡಿ ತಮ್ಮ ಹಣವನ್ನು ತೆಗೆದುಕೊಳ್ಳಬೇಕು ಇದು ಜನತೆಯಲ್ಲಿ ಆ ಸಂಸ್ಥೆಗೆ ಇರುವ ವಿಶ್ವಾಸವೇ ? ಆ ವಿಶ್ವಾಸಕ್ಕೆ ದೊಡ್ಡ ಮೋಸ ಹಾಗೂ ದ್ರೋಹ ಮಾಡಿದ್ದಾರೆಂದು ಅನ್ನಿಸುತ್ತದೆ. ಸ್ವಾಭಾವಿಕವಾಗಿ ಇದರಲ್ಲಿ ದೊಡ್ಡ ದೊಡ್ಡ ಜನರಿದ್ದಾರೆ ಅದಕ್ಕಾಗಿ ಯಾರು ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೇನೊ ಎನ್ನುತಕ್ಕಂಥ ಪರಿಸ್ಥಿತಿ ಉದ್ಭವವಾಗುತ್ತದೆ. ಇವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಏನು ಅನುಕೂಲ ಇದೆ ಎಂಬುದನ್ನು ಚಾರಿಟಿ ಕಮೀಷನರ್‌ರವರಿಂದ ವರದಿ ಬಂದ ತಕ್ಷಣ ಏನು ಮಾಡಬಹುದೆಂಬುದನ್ನು ಪರಿಶೀಲನೆ ಮಾಡಬೇಕು. ಇದರ ಬಗ್ಗೆ ವಿಚಾರಣೆಯಾಗಬೇಕು. ಮತ್ತು ಮುಖ್ಯವಾಗಿ ತೇವಣಿದಾರರ ಹಣವನ್ನು ವಾಪಸ್ಸು ಸಿಕ್ಕಬೇಕು. ಮತ್ತು ಇರತಕ್ಕಂಥ ಬಡ್ಡಿಯೂ ಕೂಡ ವಾಪಸ್ಸು ಸಿಕ್ಕಬೇಕು. ಅದಕ್ಕಾಗಿ ಪ್ರಯತ್ನ ನಡೆಯಬೇಕು. ಅದಕ್ಕಾಗಿ ಸರ್ಕಾರ ತನ್ನ ಪ್ರಭಾವವನ್ನು ಕಾನೂನಿನ ಮೂಲಕ ಉಪಯೋಗಿಸಬೇಕು ಎಂಬುದಾಗಿ ತೇವಣಿದಾರರ ಪರವಾಗಿ ಹಾಗೂ ಉತ್ತರ ಕರ್ನಾಟಕದ ಜನತೆಯ ಪರವಾಗಿಯೂ ತಮ್ಮನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

SRI L. G. HAVANUR (Minister for Law, Social Welfare & Backward Classes).—Sir, I wish to make the following :

Sri S. R. Bommai and other Members of the Legislative Assembly have issued the above notice stating that Loka Shikshana Trust is running Samyukta Karnataka Daily a publication from Bangalore and Hubli and other weekly and monthly publications, that the trust was built by devoted public of North Karnataka area and Sri R. R. Divakar was the sole trustee of the trust.

(2) It is alleged in the said notice that 700 poor and middle class families have deposited sums to the tune of Rs. 30 lakhs in the said Trust, that the trustees have not paid any interests and have not returned the deposits and the depositors have been cheated by the Trustees. It is also alleged that the Trust properties both movable and immovable are being transferred to Jaya Karnataka New Printers Ltd.

(3) The Loka Shikshana Trust, Hubli, is a public trust registered under No. E 50 (DWR) 1953 under the Bombay Public Trust Act holding Sri R. R. Divakar as a sole trustee. The objects of the trust as stated in the trust-deed dated 15th February 1935 are to spread Indian Nationalism and such ideals as are conducive to national solidarity by all loyal methods which shall be done in Karnataka mainly through Kannada by means of keeping a press on business lines and printing and publishing journals, pamphlets and books.

(4) Information may have to be obtained from the Charity Commissioner. Also, whether the dipositors have been cheated as alleged in the above notice will have to be ascertained from the appropritate authorities.

ಈ ಸಂಸ್ಥೆಯ ಬಗ್ಗೆ ಹಾಗೂ ಅಲ್ಲಿಯ ಕೆಲಸದ ಬಗ್ಗೆ ಯಾವ ರೀತಿ ವಿಷಾದವನ್ನು ಮಾನ್ಯ ಬೊಮ್ಮಾಯಿಯವರು ವ್ಯಕ್ತಪಡಿಸಿದ್ದಾರೋ ಆಷ್ಟೇ ವಿಷಾದವನ್ನು ಸರ್ಕಾರ ಕೂಡ ವ್ಯಕ್ತಪಡಿಸಬೇಕಾಗಿದೆ. ಳಿ.ಆ ಸಿವಿಲ್ ಮೊಕದ್ದಮೆಗಳು ಈ ಸಂಸ್ಥೆಯ ಮೇಲಿದೆ. ಅನೇಕ ಠೇವಣಿದಾರರಿಂದ ಸರ್ಕಾರಕ್ಕೆ ಬರುತ್ತಿರತಕ್ಕಂತಹ ತಕರಾರುಗಳಿವೆ. ಮತ್ತು ಹೈಕೋರ್ಟಿನಲ್ಲಿ ದಾವಿಲಾದ ರಿಟ್ ಪಿಟಿಷನ್‌ಗಳು ಇವೆ. ಜೊತೆಗೆ ಇನ್ನೂ ಕೆಲವು ಕಾರಣಗಳಿವೆ. ಈ ಟ್ರಸ್ಟನ್ನು ಒಂದು ಒಳ್ಳೆಯ ಸದುದ್ದೇಶದಿಂದ ಮತ್ತು ರಾಷ್ಟ್ರೀಯ ಭಾವನೆಯನ್ನು ನಮ್ಮ ಕರ್ನಾಟಕ ಜನತೆಯಲ್ಲಿ ಬೆಳೆಸಬೇಕು ಎನ್ನುವ ಉದ್ದೇಶದಿಂದ ಇದನ್ನು ಪ್ರಾರಂಭ ಮಾಡಿದರು. ಆ ಉದ್ದೇಶ ಕೆಲವು ಮಟ್ಟಿಗೆ ಸಾಫಲ್ಯತೆಯಾಗಿದ್ದರೂ ಕೂಡ, ಹಣದ ಅವಶ್ಯಕತೆಯಿರುವ ಬಗ್ಗೆ ಅನೇಕ ತಕರಾರುಗಳು ಬಂದಿದ್ದುದರಿಂದ ಅಲ್ಲಿ ಹಣ ಅವಶ್ಯಕತೆಯು ಆಗಿರಬಹುದು ಎನ್ನುವ ಶಂಕೆ ಸರ್ಕಾರಕ್ಕೆ ಮೂಡಿದೆ. ಆದರೆ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಸರ್ಕಾರದವರು ಹಣವನ್ನು ಠೇವಣಿದಾರರಿಗೆ ಹೇಗೆ ಮಾಪಸ್ಸು ಕೊಡಿಸಬಹುದು. ಮತ್ತು ಯಾವ ರೀತಿ ಈ ಟ್ರಸ್ಟ್ ಮೇಲೆ ಸರ್ಕಾರ ಕಾನೂನನ್ನು ಉಪಯೋಗ ಮಾಡಬೇಕು ? ಮತ್ತು ಎಷ್ಟು ಪರಿಣಾಮಕಾರಿಯಾಗಿ ಕಾನೂನನ್ನು ಉಪಯೋಗ ಮಾಡಬಹುದು ಎನ್ನುವುದರ ಬಗ್ಗೆ ವಿಚಾರ ಮಾಡಿ, ಚಾರಿಟಿ ಕಮಿಷನರ್‌ರವರಿಂದ ವರದಿ ಬಂದ ನಂತರ ಕ್ರಮ ತೆಗೆದುಕೊಂಡು ಈ ಸಂಸ್ಥೆಯಲ್ಲಿ ಹಣವನ್ನು ತೊಡಗಿಸಿರತಕ್ಕಂಥ ಜನರಿಗೆ ರಕ್ಷಣೆ ಸರ್ಕಾರ ಒದಗಿಸಿ ಕೊಡುತ್ತದೆ ಎನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇವೆ. ಮತ್ತು ಇನ್ನು ಮುಂದೆ ಇಂತಹ ಅವ್ಯವಹಾರಗಳು ಈ ಟ್ರಸ್ಟಿನಲ್ಲಿ ಆಗದ ರೀತಿ, ಸಾಧ್ಯ ಇದ್ದರೆ ಹೊಸ ಟ್ರಸ್ಟನ್ನು ನಿರ್ಮಾಣ ಮಾಡಲಿಕ್ಕೆ ಹಾಗೇನಾದರೂ ಉತ್ತರ ಕರ್ನಾಟಕ ಜನತೆ ಮುಂದೆ ಬರುವುದಾದರೆ, ಅಥವಾ ಇಡೀ ಕರ್ನಾಟಕ ಜನತೆ ಮುಂದೆ ಬರುವುದಾದರೆ ಅಂತಹ ಅವಕಾಶವನ್ನು ಕೂಡ ಸರ್ಕಾರ ಒದಗಿಸಿಕೊಡುವುದಕ್ಕೆ ಸಿದ್ಧವಾಗಿದೆ. ಜೊತೆಗೆ ಈ ಸಂಸ್ಥೆಯ ಮೇಲೆ ಕ್ರಮ ತೆಗೆದುಕೊಳ್ಳಲು ಈಗ ಇರುವ ಕಾನೂನು ಆಡ್ಡಿ ಬರುವುದಾದರೆ ಅಂದರೆ ಇಂತಹ ಟ್ರಸ್ಟಿನಲ್ಲಿರತಕ್ಕಂಥ ಸಾರ್ವಜನಿಕರ ಹಣ ದುರುಪಯೋಗ ಆಗದ ರೀತಿ ಕಾನೂನನ್ನು ಬದಲಾವಣೆ ಮಾಡಬೇಕಾದರೆ ಕಾನೂನಿಗೆ ತಿದ್ದುಪಡಿ ಕೂಡ ತರಲಿಕ್ಕೆ ಸರ್ಕಾರ ಸಿದ್ಧವಿದೆ. ಮತ್ತು ಮಾನ್ಯ ಶ್ರೀ ಬೊಮ್ಮಾಯಿಯವರು ಹೇಳಿದ ರೀತಿಯಲ್ಲಿ ಒಬ್ಬ ವ್ಯಕ್ತಿ ಸತ್ಯಾಗ್ರಹ ಮಾಡಿದ್ದರು. ಅವರು ಉಪವಾಸ ಮಾಡಿದ್ದಕ್ಕೆ ಅವರಿಗೆ ಹಣವನ್ನು ಕೊಟ್ಟನಂತರ ಅವರು ಸತ್ಯಾಗ್ರಹ ವಾಪಸ್ಸಿರುವುದರಿಂದ ಈ ಪ್ರಶ್ನೆಗೆ ಅಷ್ಟು ಮಹತ್ವ ಈಗ ಇಲ್ಲ ಎಂಬುದಾಗಿ ಹೇಳಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಆಶ್ವಾಸನೆಗಳಿಗೆ ನಾನು ಸ್ವಾಗತ ಮಾಡುತ್ತೇನೆ. ಸರ್ಕಾರ ಕೂಡ ಅಲ್ಲಿ ಆಗಿರತಕ್ಕಂಥ ಅವ್ಯವಹಾರಗಳ ಬಗ್ಗೆ ಸೂಕ್ಷ್ಮ ಕ್ರಮ ಕೈಗೊಳ್ಳತಕ್ಕಂಥ ಮನಸ್ಸು ಮಾಡಿದೆ. ಅದಕ್ಕೆ ನನ್ನ ಅಭಿನಂದನೆ. ವಿರಚನೆಯಾಗಿ ಉಪವಾಸ ಮುಗಿಯಿತು ಆದ್ದರಿಂದ ಅದಕ್ಕೆ ಇರತಕ್ಕ ಮಾಹತ್ವ ಕಡಿಮೆಯಾಗಿದೆ ಎಂಬುದಾಗಿ ಹೇಳುವುದು ಸಾಧುವಾದುದಲ್ಲ. ಅಂದರೆ ಆಸ್ಪತ್ರೆಯಲ್ಲಿರತಕ್ಕ ೭೦೦ ಮಂದಿ ಠೇವಣಿದಾರರು ಉಪವಾಸ ಮಾಡಿದರೆ ಅವರಿಗೆ ಸಿಕ್ಕುತ್ತದೆ ಎನ್ನುವ ಅರ್ಥ ಬರುತ್ತದೆ. ಈಗ ಒಬ್ಬರಿಗೆ ಸಿಕ್ಕಿದೆ. ಆದರೆ ಟೌನ್ ಠೇವಣಿದಾರರ ಹಣ ಇನ್ನೂ ಸಿಕ್ಕಿಲ್ಲ. ಸರ್ಕಾರಕ್ಕೆ ಎಷ್ಟು ಅಧಿಕಾರ ಇದೆ ಅದನ್ನು ಚಾರಿಟಿ ಕಮೀಷನರ್‌ರವರಿಂದ ವರದಿ

ಬಂದಮೇಲೆ ಕ್ರಮ ತೆಗೆದುಕೊಳ್ಳಬೇಕು. ಆದರೆ ಕೂಡಲೆ ಕನಿಷ್ಟ ಪಕ್ಷ ಒಂದು ತಿಂಗಳೊಳಗಾದರೂ ಇದರ ಬಗ್ಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂಬುದು ನನ್ನ ಸಲಹೆ. ಮತ್ತು ಈಗಿನ ಕಾಯಿದೆಯಲ್ಲಿ ತಮಗೆ ಏನಾದರೂ ತೊಂದರೆಯಾದರೆ ಅದಕ್ಕೆ ಸೂಕ್ತತಿದ್ದುಪಡಿಯನ್ನು ಕೂಡಲೇ ಈ ಅಧಿವೇಶನದಲ್ಲೇ ತೆಗೆದುಕೊಂಡು ಬರಬೇಕೆಂದು ಹೇಳುತ್ತೇನೆ. ಇಂತಹ ವ್ಯವಸ್ಥೆಯನ್ನು ಮಾಡುತ್ತಿರುವುದಕ್ಕೆ ಸರ್ಕಾರವನ್ನು ಸ್ವಾಗತ ಮಾಡುತ್ತೇನೆ. ಶೇವಣಿದಾರರಿಗೆ ಹಣವನ್ನು ವಾಪಸ್ಸು ಕೊಡಿಸಿ ಕೊಡಲು ಟ್ರಿಬ್ಯುನಲ್ ಮೇಲೆ ಒಂದು ತಿಂಗಳಲ್ಲಿ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಲ್. ಜಿ. ಹಾವನೂರು.—ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದಾಗಿ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಮತ್ತು ಅವಶ್ಯಕ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದು ಮುಂದು ನೋಡುವುದಿಲ್ಲ. ಅವರು ಎಂತಹ ದೊಡ್ಡ ವ್ಯಕ್ತಿಗಳಾಗಿರಲಿ, ಅದರ ಹಿನ್ನೆಲೆ ಏನೇ ಇರಲಿ, ಅವರು ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಹಾಗೂ ಅವರು ಈ ದೇಶಕ್ಕೆ ಎಷ್ಟೇ ತ್ಯಾಗ ಮಾಡಿರಲಿ ಅವೆಲ್ಲವನ್ನೂ ಕಡೆಗಣಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಶೇವಣಿದಾರರ ಹಿತದೃಷ್ಟಿಯಿಂದ ಹಾಗೂ ಸಂಸ್ಥೆಯ ಹಿತ ದೃಷ್ಟಿಯಿಂದ ಈ ಸಂಸ್ಥೆ ಮುಂದೆ ಬೆಳೆದುಕೊಂಡು ಹೋಗಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಕಾರಣ ಅನೇಕ ದಶಕಗಳಿಂದ ಕಟ್ಟಿದಂತಹ ಇಂತಹ ದೊಡ್ಡ ಸಂಸ್ಥೆಯನ್ನು ಕೆಡಿಸಬಾರದು, ಇಂತಹ ಸಂಸ್ಥೆಗಳನ್ನು ಬೆಳೆಸಿಕೊಂಡು ಹೋಗಬೇಕು. ಮತ್ತು ಇದರಿಂದ ಜನರಿಗೆ ಅನುಕೂಲ ಆಗಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ನೀವು ಮಾತ್ರ ಕಾಲದ ಮಿತಿಗೆ ನಮ್ಮನ್ನು ಒತ್ತಾಯಿಸಬಾರದು ಎಂಬುದಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ii) re : Delay in providing housing facilities to SCS/STS and Backward Communites.

† SRI M. V. RAJASEKHARAN (Uttarahalli)·—Sir, I would like to raise a matter under Rule 312 regarding the serious situation developing in the State due to the inordinate delay in the allotment of house-rites and giving required financial and material assistance for consruction of houses to the Scheduled Castes, Scheduled Tribes and other weaker sections of the society in the Karnataka State.

SRI P. F. RODRIGUES (Minister of State for Housing).—Sir, I wish to make the following statement :

A total number of 7,87,953 house-sites have been distributed to the rural poor in the State out of 8,64,328 eligible families. Out of the families who are allotted house-sites, 2,62,791 families belong to Scheduled Castes and 14,395 families to the Scheduled Tribes. The per centage of distribution to these families comes to 35. Powers have been delegated to the Deputy Commissioners in the matter of issue of preliminary and final notifications under the Act to quicken the distribution of sites. Necessary funds have also been made available to the Deputy Commissioners for development and payment of compensation in the matter of acquisition of lands under the Karnataka Acquisition of Lands for Grant of House-sites Act.

2. Under the People's housing scheme, 83,878 houses and 12,928 houses under the Experimental low cost housing scheme have been constructed upto the end of March 1978. In all 96,806 houses